**ಸಾಕ್ಷಿಯನ್ನು ದಿನಾಂಕಃ 25.09.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ. ಬಿ.ಎಸ್.ಯು. ವಕೀಲರಿಂದಃ**

ನನ್ನ ಮಾವ ಅಂದರೆ ನನ್ನ ಗಂಡನ ತಂದೆ ನಾನು ಮದುವೆಯಾಗುವ ಮೊದಲೇ ತೀರಿಕೊಂಡಿರುತ್ತಾರೆ. ನಾನು ಮದುವೆಯಾಗಿ ಸುಮಾರು 30 ವರ್ಷಗಳಾಗಿರುತ್ತವೆ. ಯಾವ ಇಸವಿಯಲ್ಲಿ ಮದುವೆಯಾಗಿರುತ್ತೇನೆಂದು ಹೇಳಲು ಗೊತ್ತಾಗುವುದಿಲ್ಲ. ನನ್ನ ಗಂಡನಾದ ಕುಮಾರ ತೀರಿಕೊಂಡು ಸುಮಾರು 09 ವರ್ಷಗಳಾಗಿರುತ್ತವೆ. ನನ್ನ ಗಂಡನ ಹೆಸರಿನಲ್ಲಿ ಯಾವುದೇ ಜಮೀನು ಇರುವುದಿಲ್ಲ. ನನ್ನ ಗಂಡನ ಹೆಸರಿಗೆ ಪುರಾ ಗ್ರಾಮದ ಸ.ನಂ. 11/2 ರಲ್ಲಿ 08½ ಗುಂಟೆ ಜಮೀನು ವಿಭಜನೆ ಮೂಲಕ ಬಂದಿರುವುದಾಗಿ ಆರ್.ಟಿ.ಸಿ.ಯಲ್ಲಿ ನಮೂದಿರುತ್ತದೆಂದರೆ ಸಾಕ್ಷಿಯು ನನ್ನ ಮದುವೆಗೆ ಮುಂಚೆಯೇ ಆಗಿತ್ತೋ-ಏನೋ ಎಂದು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಾಗಮ್ಮ ಕೋಂದ ಕುಮಾರ ಎಂದರೆ ನಾನೇ ಎಂದರೆ ಸರಿ. ನೇರಳೆ ಗ್ರಾಮದ ಸ.ನಂ. 159/1 ರಲ್ಲಿ 03 ಗುಂಟೆ ಜಮೀನು ನನ್ನ ಹೆಸರಿನಲ್ಲಿ ಅರ್..ಟಿ.ಸಿ. ಇರುತ್ತದೆಂದರೆ ಸಾಕ್ಷಿಯು ಅದು ನಾನು ಕ್ರಯಕ್ಕೆ ಪಡೆದ ಆಸ್ತಿ ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ನಾನು ಕಳೆದ ಸುಮಾರು 09 ವರ್ಷಗಳ ಹಿಂದೆ ಖರೀದಿ ಮಾಡಿರುತ್ತೇನೆ. ಸದರಿ ಆಸ್ತಿಯನ್ನು ಖರೀದಿ ಮಾಡುವ ಸಮಯದಲ್ಲಿ ನನ್ನ ಗಂಡ ಬದುಕಿದ್ದರು. ಅದೇ ರೀತಿ ಪುರಾ ಗ್ರಾಮದ ಸ.ನಂ. 11/1 ರಲ್ಲಿ 2 ನೇ ಪ್ರತಿವಾದಿಗೆ 08½ ಗುಂಟೆ ಜಮೀನು ವಿಭಜನೆ ಮೂಲಕ ಬಂದಿರುವುದಾಗಿ ಆರ್.ಟಿ.ಸಿ.ಯಲ್ಲಿ ನಮೂದಿರುತ್ತದೆಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಒಟ್ಟು ಕುಟುಂಬದಲ್ಲಿ ವಿಭಜನೆಯಾದ

ಆಸ್ತಿಯನ್ನು ಈ ದಾವೆಯಲ್ಲಿ ನಾನು ಉದ್ದೇಶಪೂರ್ವಕವಾಗಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕಃ 10.12.1988 ರಂದು ನನ್ನ ಗಂಡನ ಕುಟುಂಬದಲ್ಲಿ ಒಟ್ಟು ಕುಟುಂಬದ ಆಸ್ತಿಯ ಸಂಬಂಧ ಹಿಸ್ಸಾ ಪಟ್ಟಿಯ ಮೂಲಕ ವಿಭಜನೆ ಆಗಿದ್ದು ಸದರಿ ವಿಚಾರ ನನಗೆ ಗೊತ್ತಿದ್ದರೂ ಸಹ ವಿಭಜನೆಯಾಗಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಗಂಡನ ಭಾಗಕ್ಕೆ ಬಂದ ಆಸ್ತಿಯನ್ನು ನಾವು 2001 ನೇ ಇಸವಿಯಲ್ಲಿ ನೋಂದಾಯಿತ ಕ್ರಯ ಪತ್ರದ ಮೂಲಕ ಉಮಾಪತಿ ಎನ್ನುವವರಿಗೆ ಮರಾಟ ಮಾಡಿದ್ದು ಆ ಬಗ್ಗೆ ಸದರಿ ಕ್ರಯ ಪತ್ರದಲ್ಲಿ ಉಲ್ಲೇಖ ಸಹ ಇರುತ್ತದೆಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಈಗ ಮಾದಾಪುರದಲ್ಲಿ ವಾಸವಾಗಿರುತ್ತಾರೆ. ಸಾಕ್ಷಿ ಮುಂದುವರೆದು ನನ್ನ ಮದುವೆಯಾಗುವ ಮೊದಲೇ ಅವರು ಬೇರೆ ಕಡೆ ವಾಸವಿದ್ದರು ಎಂದು ನುಡಿಯುತ್ತಾರೆ. ನಾನು ಬೀಚನಹಳ್ಳಿಯ ಕ್ವಾಟ್ರರ್ಸ್ ನಲ್ಲಿ ವಾಸವಿರುತ್ತೇನೆ. 2 ನೇ ಪ್ರತಿವಾದಿ ಗುರುಸ್ವಾಮಿರವರು ಸಹ ಬೀಚನಹಳ್ಳಿಯ ಕ್ವಾಟ್ರರ್ಸ್ ನಲ್ಲಿ ವಾಸವಿರುತ್ತಾರೆ. ನಾವು ಎಲ್ಲರೂ ಒಟ್ಟು ಕುಟುಂಬದಲ್ಲಿ ವಾಸವಿರುತ್ತೇವೆ. ದಾವಾ ಐಟಂ ನಂ. 3 ರ ಆಸ್ತಿಯನ್ನು 2 ನೇ ಪ್ರತಿವಾದಿಯು ಸ್ವಯಾರ್ಜಿತವಾಗಿ ಕ್ರಯಕ್ಕೆ ಪಡೆದ ಆಸ್ತಿಯಾಗಿರುತ್ತದೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಒಟ್ಟು ಕುಟುಂಬದಲ್ಲಿರುವಾಗ ಖರೀದಿಸಿದ ಆಸ್ತಿ ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ಯಾರಿಂದ ಯಾವ ವರ್ಷದಲ್ಲಿ ಖರೀದಿಸಲಾಗಿದೆ ಎಂದು ನನಗೆ ಗೊತ್ತಿರುವುದಿಲ್ಲ. ಅದೇ ರೀತಿ ಸದರಿ ಆಸ್ತಿಯನ್ನು ಎಷ್ಟು ಕ್ರಯದ ಪ್ರತಿಫಲಕ್ಕೆ ಖರೀದಿ ಮಾಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರೆದು ಒಟ್ಟು ಕುಟುಂಬದಲ್ಲಿರುವಾಗ ಸದರಿ ಆಸ್ತಿಯನ್ನು ಖರೀದಿ ಮಾಡಿದ್ದು

ಅದರ ವ್ಯವಹಾರವನ್ನು ಗಂಡಸರೇ ಮಾಡಿದ್ದರು ಎಂದು ನುಡಿಯುತ್ತಾರೆ. ಅದರ ಚೆಕ್ ಬಂದಿಯನ್ನು ನನಗೆ ಹೇಳಲು ಆಗುವುದಿಲ್ಲ. ದಾವಾ ಐಟಂ ನಂ. 1ರ ಆಸ್ತಿಯು ಕುಟುಂಬದಲ್ಲಿ ಆದ ವಿಭಾಗದಲ್ಲಿ 1ನೇ ಪ್ರತಿವಾದಿಯ ಭಾಗಕ್ಕೆ ಬಂದ ಆಸ್ತಿಯಾಗಿರುತ್ತದೆಂದರೆ ಸರಿಯಲ್ಲ. ದಾವಾ ಐಟಂ ನಂ. 2ರ ಆಸ್ತಿಯು ಮೂಲತಃವಾಗಿ ನನ್ನ ಗಂಡನ ತಂದೆಯಾದ ಗುರುಮಲ್ಲಪ್ಪರವರಿಗೆ ಸೇರಿದ ಆಸ್ತಿಯಾಗಿರುತ್ತದೆ. ಅದು ಈಗ 1ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ. ದಾವಾ ಐಟಂ ನಂ. 2ರ ಆಸ್ತಿಯು ಕುಟುಂಬದಲ್ಲಿ ಆದ ವಿಭಾಗದಲ್ಲಿ 1ನೇ ಪ್ರತಿವಾದಿಯ ಭಾಗಕ್ಕೆ ಬಂದ ಆಸ್ತಿಯಾಗಿರುತ್ತದೆಂದರೆ ಸರಿಯಲ್ಲ.

**ಈ ಹಂತದಲ್ಲಿ ಪ್ರತಿವಾದಿಗಳ ಪರ ವಕೀಲರು ಮುಂದಿನ ಪಾಟೀ ಸವಾಲಿಗಾಗಿ ಸಮಯಾವಕಾಶವನ್ನು ಕೋರಿದ್ದು, ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**